ಇದ್ದೇನೆ. ಎಲ್ಲಿಯೇ ಒಳ್ಳೆಯ ಕೆಲಸ ಸಿಕ್ಕರೂ ಮಾಡುತ್ತೇನೆ' ಎನ್ನುವ ಹಿತಾ, ಮುಂಬೈ ಸಿನಿಮಾಜಗತ್ತಿನ ಬಗ್ಗೆ ಉತ್ಸಾಹದಿಂದ ಮಾತಾಡುತ್ತಾರೆ.

'ತುಂಬ ವಿಶಾಲವಾದ ಜಗತ್ತು ಇದು. ಪ್ರತಿಭೆ ಇದ್ದರೆ ನಿರಂತರವಾಗಿ ಕೆಲಸ ಮಾಡುತ್ತಿರಬಹುದು. ಇಲ್ಲಿ ಪ್ರತಿಯೊಂದು ಅವಕಾಶವೂ ಆಡಿಷನ್ ಮೂಲಕವೇ ಸಿಗುತ್ತದೆ. ಕನ್ನಡದಲ್ಲಿ ಐದಾರು ಸಿನಿಮಾ ಮಾಡಿದ್ದರೂ ಇಲ್ಲಿ ಆಡಿಷನ್‌ಗೆ ಹೋಗಿಯೇ ಪಾತ್ರಕ್ಕೆ ಆಯ್ಕೆ ಆಗುತ್ತೇನೆ. ಒಂದೋ ನಾನು ಕೆಲಸದಲ್ಲಿ ಬ್ಯುಸಿ ಇರುತ್ತೇನೆ, ಇಲ್ಲಾ ಕೆಲಸವನ್ನು ಗಿಟ್ಟಿಸಿಕೊಳ್ಳಲು ಆಡಿಷನ್ ಕೊಡುವುದರಲ್ಲಿ ಬ್ಯುಸಿ ಇರುತ್ತೇನೆ. ಆಡಿಷನ್ ಎನ್ನುವುದು ನನ್ನ ಪಾಲಿಗೆ ನಟನೆಯ ವ್ಯಾಯಾಮದ ರೀತಿ. ಅದನ್ನು ನನ್ನೊಳಗಿನ ಕಲಾವಿದೆಯನ್ನು ಜೀವಂತವಾಗಿಡಲು ಬಳಸಿಕೊಳ್ಳುತ್ತೇನೆ' ಎನ್ನುವ ಅವರು, ದಕ್ಷಿಣ ಭಾರತದ ಕಲಾವಿದರನ್ನು ನೋಡುವ ರೀತಿ ಇತ್ತೀಚೆಗೆ ಬದಲಾಗಿದ್ದರ ಕುರಿತೂ ಗಮನಸೆಳೆಯುತ್ತಾರೆ.

'ದಕ್ಷಿಣ ಭಾರತದ ಸಿನಿಮಾಗಳು ಈಗ ಎಲ್ಲೆಡೆ ದೊಡ್ಡ ಮಟ್ಟದಲ್ಲಿ ರೀಚ್ ಆಗುತ್ತಿವೆ. ಹಾಗಾಗಿ ಸರಿಯಾದ ಸಮಯದಲ್ಲಿಯೇ ನಾನು ಮುಂಬೈನಲ್ಲಿ ಇದ್ದೇನೆ. ದಕ್ಷಿಣ ಭಾರತದ ಕಲಾವಿದರಿಗೆ ಇತ್ತೀಚೆಗೆ ಆದ್ಯತೆ ಸಿಗುತ್ತಿದೆ. ಅವರನ್ನು ಇಟ್ಟುಕೊಂಡು ಪಾತ್ರಗಳನ್ನು ಬರೆಯುತ್ತಾರೆ. ನಾವು ಪರಿಶ್ರಮವಹಿಸಿ ಕೆಲಸ ಮಾಡಬೇಕು. ಆಗ ಫಲ ಸಿಕ್ಕೇ ಸಿಗುತ್ತದೆ' ಎನ್ನುವುದು ಅವರ ವಿವರಣೆ.

ನಟ ಕಿರಣ್ ಶ್ರೀನಿವಾಸ್ ಅವರನ್ನು ಮದುವೆಯಾಗಿರುವ ಹಿತಾಗೆ ತಾವಿಬ್ಬರೂ ಸೇರಿಕೊಂಡು ನನಸು ಮಾಡಿಕೊಳ್ಳಬೇಕಾದ ಹಲವು ಕನಸುಗಳಿವೆ.

'ನಮ್ಮಿಬ್ಬರಿಗೂ ನಟನೆಯನ್ನು ಹೊರತುಪಡಿಸಿ ಬೇರೆ ಕ್ಷೇತ್ರಗಳಲ್ಲಿಯೂ ಆಸಕ್ತಿ ಇದೆ. ಕಿರಣ್‌ಗೆ ನಿರ್ದೇಶನ ಮಾಡುವ ಆಸೆ ಇದೆ. ನನಗೆ ಸಿನಿಮಾ ನಿರ್ಮಾಣ ಮಾಡುವ ಆಸೆ ಇದೆ. ಒಂದು ನಿರ್ಮಾಣ ಸಂಸ್ಥೆ ಪ್ರಾರಂಭಿಸಬೇಕು, ಹೊಸ ರೀತಿಯ ಸಿನಿಮಾಗಳನ್ನು, ಹೊಸ ನಿರ್ದೇಶಕರಿಗೆ ಅವಕಾಶಗಳನ್ನು ಕೊಡಬೇಕು. ಕನ್ನಡದಲ್ಲಿಯೇ ಸಾಕಷ್ಟು ಗಮನಾರ್ಹ ಕೆಲಸ ಮಾಡಬೇಕು ಎಂಬ ಆಸೆ ಇಬ್ಬರಿಗೂ ಇದೆ. ಅದನ್ನು ಈಡೇರಿಸಿಕೊಳ್ಳುವ ವಿಶ್ವಾಸವೂ ಇದೆ' ಎನ್ನುವ ಹಿತಾ ಹಿಂದಿ ಭಾಷೆಯೊಟ್ಟಿಗೆ ಕನ್ನಡದ ಸಿನಿಮಾಗಳಲ್ಲಿಯೂ ನಟಿಸುತ್ತಲೇ ವೃತ್ತಿಬದುಕನ್ನು ಕಟ್ಟಿಕೊಳ್ಳುವ ಹುಮ್ಮಸ್ಸಿನಲ್ಲಿದ್ದಾರೆ. ■

# ನಿಧಿ–ದಿಗಿ ಕಾಂಬಿನೇಷನ್





ನಿಧಿ ಸುಬ್ಬಯ್ಯ ತಮ್ಮ ವೃತ್ತಿಜೀವನದ ಎರಡನೇ ಇನಿಂಗ್ಸ್ ಆರಂಭಿಸಿ ಹಲವು ಸಿನಿಮಾಗಳಲ್ಲಿ ನಟಿಸುತ್ತಿದ್ದಾರೆ. ದೂದ್ ಪೇಡಾ ದಿಗಂತ್ ಕೂಡ 'ಗಾಳಿಪಟ 2' ಸಿನಿಮಾದ ಯಶಸ್ಸಿನಿಂದ ತಮ್ಮ ದಾರಿಯಲ್ಲಿ ಏರುದಿಬ್ಬವನ್ನು ಹತ್ತಿನಿಂತಿದ್ದಾರೆ. ಹಿಂದೆ ನಿಧಿ ಮತ್ತು ದಿಗಂತ್ ಜೋಡಿ 'ಪಂಚರಂಗಿ' ಸಿನಿಮಾದಲ್ಲಿ ಹುಡುಗಾಟಿಕೆಯ ಮೂಲಕವೇ ಗಮನಸೆಳೆದಿದ್ದರು. ಈಗ ಸುದೀರ್ಘ ಅವಧಿಯ ನಂತರ ಈ ಜೋಡಿ ಮತ್ತೆ ತೆರೆಯ ಮೇಲೆ ಒಂದಾಗುತ್ತಿದೆ. ಅದು ಸಮರ್ಥ್ ಕಡ್ಕೋಳ್ ಅವರ 'ಎಡಗೈ ಅಪಘಾತಕ್ಕೆ ಕಾರಣ' ಎಂಬ ಸಿನಿಮಾದಲ್ಲಿ ದಿಗಂತ್ ಮತ್ತು ನಿಧಿ ಒಟ್ಟಿಗೇ ನಟಿಸುತ್ತಿದ್ದಾರೆ. ಈಗಾಗಲೇ ಈ ಸಿನಿಮಾದ ಚಿತ್ರೀಕರಣ ಪ್ರಾರಂಭವಾಗಿದ್ದು, ನಿಧಿ ಹೊಸದಾಗಿ ಚಿತ್ರತಂಡಕ್ಕೆ ಸೇರಿಕೊಂಡಿದ್ದಾರೆ. ಚಿತ್ರದ ಕಥೆಯ ಬಗ್ಗೆಯಾಗಲಿ, ನಿಧಿ ಅವರ ಪಾತ್ರದ ಬಗ್ಗೆಯಾಗಲಿ ಚಿತ್ರತಂಡ ಸುಳಿವು ಬಿಟ್ಟುಕೊಟ್ಟಿಲ್ಲ. 'ಮನರಂಜನೆಗೆ ಮೋಸ ಇಲ್ಲ' ಎಂಬ ಮಂತ್ರವನ್ನೇ ಪುನರುಚ್ಚರಿಸುತ್ತಿದ್ದಾರೆ. ಈಗ ಯಲಹಂಕದ ಲಕ್ಷುರಿ ಅಪಾರ್ಟ್‌ಮೆಂಟ್ ಒಂದರಲ್ಲಿ ಚಿತ್ರೀಕರಣ ನಡೆಸಲಾಗುತ್ತಿದೆ. ದಿಗಂತ್‌ಗೆ ಜೋಡಿಯಾಗಿ ಈ ಸಿನಿಮಾದಲ್ಲಿ ಧನು ಹರ್ಷ ನಟಿಸುತ್ತಿದ್ದಾರೆ. ಹಾಗಾದರೆ ನಿಧಿ ಪಾತ್ರವೇನು? ಅವರು ಯಾವ ರೀತಿಯಲ್ಲಿ ದಿಗಂತ್ ಜೊತೆಗೆ ತೆರೆಯ ಮೇಲೆ ಕಾಣಿಸಿಕೊಳ್ಳಲಿದ್ದಾರೆ ಎಂಬೆಲ್ಲ ಕುತೂಹಲ ಹುಟ್ಟುವುದಂತೂ ಸಹಜ. ಈ ಕುತೂಹಲವೇ ಜನರನ್ನು ಚಿತ್ರಮಂದಿರಕ್ಕೆ ಕರೆದುಕೊಂಡು ಬರಲಿದೆ ಎಂಬ ವಿಶ್ವಾಸದಲ್ಲಿ ನಿರ್ದೇಶಕರಿದ್ದಾರೆ. ಅಭಿಮನ್ಯು ಛಾಯಾಗ್ರಹಣ ಈ ಚಿತ್ರಕ್ಕಿದೆ. ■

# ನ್ಯೂಯಾರ್ಕ್‌ನಲ್ಲಿ ಇತಿ ಮಿಂಚು!



ಇತಿ ಆಚಾರ್ಯ ಕನ್ನಡ ಸಿನಿಪ್ರೇಮಿಗಳಿಗೆ ಚಿರಪರಿಚಿತರೇನೂ ಅಲ್ಲ. ಆದರೆ ಶಿವರಾಜ್‌ಕುಮಾರ್ ನಟನೆಯ 'ಕವಚ' ಸಿನಿಮಾ ನೋಡಿದವರು ಅವರ ಮುಖಚಹರೆಯನ್ನು ಮರೆತಿರಲಿಕ್ಕಿಲ್ಲ. ಕನ್ನಡದಲ್ಲಿಯೇ ನೆಲೆ ಕಂಡುಕೊಳ್ಳಬೇಕು ಎಂದು ಪ್ರಯತ್ನಿಸುತ್ತಿರುವ ಇತಿ ಈಗ ನ್ಯೂಯಾರ್ಕ್‌ನಲ್ಲಿಯೂ ಸುದ್ದಿ ಮಾಡಿದ್ದಾರೆ. ನ್ಯೂಯಾರ್ಕ್‌ನ ಟೈಮ್ಸ್ ಸ್ಕ್ವೇರ್ ಬಿಲ್‌ಬೋರ್ಡ್‌ನ ಹೋರ್ಡಿಂಗ್ಸ್‌ನಲ್ಲಿ ಅವರ ಚಿತ್ರ ಮಿಂಚಿದೆ.

ನ್ಯೂಯಾರ್ಕ್ ಫ್ಯಾಷನ್ ವೀಕ್‌ನಲ್ಲಿ ಭಾಗವಹಿಸಿದ್ದ ಇತಿ ಫೋಟೊ ಟೈಮ್ಸ್ ಸ್ಕ್ವೇರ್ ಬಿಲ್‌ಬೋರ್ಡ್ ಹೋರ್ಡಿಂಗ್ಸ್‌ನಲ್ಲಿ ಮಿಂಚಿದೆ.

ಈ ಸಲದ ಕಾನ್ಸ್ ಫಿಲ್ಮ್ ಫೆಸ್ಟ್ ರೆಡ್ ಕಾರ್ಪೆಟ್‌ನಲ್ಲಿಯೂ ಇತಿ ಹೆಜ್ಜೆ ಹಾಕುವ ಮೂಲಕ ಗಮನಸೆಳೆದಿದ್ದರು. ಸಿನಿಮಾ ನಿರ್ಮಾಣ ಮತ್ತು ನಟನೆ ಎರಡರಲ್ಲಿಯೂ ತೊಡಗಿಕೊಂಡಿರುವ ಅವರು ನಟಿಸಿರುವ 'ಲಕ್ಷ್ಮೀಪುತ್ರ' ಸಿನಿಮಾ ಬಿಡುಗಡೆಗೆ ಸಜ್ಜಾಗಿದೆ. ■